ಮೂಲ ದಾವಾ ನಂಃ 72/2017

ಪಿ ಡಬ್ಲುಃ 01

ಸಾಕ್ಷಿಯನ್ನು ದಿನಾಂಕಃ **14-02-2024** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಜಿ.ಜಿ.ಬಿ ವಕೀಲರಿಂದ**

ನಾನು ನ್ಯಾಯಾಲಯದ ಮುಂದೆ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ. ಕಡತೋಕಾ ಗ್ರಾಮದ ಸರ್ವೇ ನಂಬರ್ 559 ಹಿಸ್ಸಾ 2 ಕ ರ ಪಹಣಿ ಪತ್ರಿಕೆಯನ್ನು ನಿಪಿ 1 ಎಂದು, ಕಡತೋಕಾ ಗ್ರಾಮದ ಸರ್ವೇ ನಂಬರ್ 559 ರ ಪಹಣಿ ಪತ್ರಿಕೆಯನ್ನು ನಿಪಿ 2 ಎಂದು, ನಕಾಶೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 3 ಎಂದು, ಕೆ.ಡಿ.ಟಿ ನಮೂನೆ ಪ್ರತಿಯನ್ನು ನಿಪಿ 4 ಎಂದು , 45/2017 ರ ಕಲಂ 148(ಎ) ಕೇವಿಯಟ್ ಪ್ರತಿಯನ್ನು ನಿಪಿ 5 ಎಂದು , ಮೂಲ ದಾವಾ ಸಂಖ್ಯೆ 115/2011 ರ ಡಿಕ್ರಿ ಮತ್ತು ತೀರ್ಪಿನ ಪ್ರತಿಗಳನ್ನು ಕ್ರಮವಾಗಿ ನಿಪಿ 6 ಮತ್ತು ನಿಪಿ 7 ಎಂದು , ಹೊನ್ನಾವರ ಪೋಲಿಸರು ನೀಡಿದ ಹಿಂಬರಹವನ್ನು ನಿಪಿ 8 ಎಂದು, ಮೂಲ ದಾವಾ ಸಂಖ್ಯೆ 116/2011 ರ ಡಿಕ್ರಿ ಮತ್ತು ತೀರ್ಪಿನ ಪ್ರತಿಗಳನ್ನು ಕ್ರಮವಾಗಿ ನಿಪಿ 9 ಮತ್ತು ನಿಪಿ 10 ಎಂದು , ಮೂಲ ದಾವಾ ಸಂಖ್ಯೆ 115/2011 ರ ವಾದ ಪತ್ರವನ್ನು ನಿಪಿ 11 ಎಂದು , ಮೂಲ ದಾವಾ ಸಂಖ್ಯೆ 116/2011 ರ ವಾದ ಪತ್ರವನ್ನು ನಿಪಿ 12 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

Sd/-

ಹೆಚ್ಚುವರಿ ಪ್ರ ದ ನ್ಯಾದಂ ಹೊನ್ನಾವರ.